**<u>ಮಧ್ಯಂತರ ಅರ್ಜಿಯ ಮೇಲೆ ಆದ ಆದೇಶದ ಮೇರೆಗೆ ಸಾಕ್ಷಿಯನ್ನು ಕರೆಯಿಸಲಾಯಿತು.</u>**

**<u>ದಿನಾಂಕಃ 22.07.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರ ಪರ ಶ್ರೀಮತಿ. ಎಸ್ ಎನ್ ಬಿ ವಕೀಲರಿಂದಃ</u>**

ನನ್ನ ಮದುವೆಯಾಗಿ 9 ವರ್ಷ ಆಗಿರುತ್ತದೆ. ಮದುವೆ ಕಾಲಕ್ಕೆ ಎದುರುದಾರರಿಗೆ 50,000 ರೂ, 4 ವರೆ ತೊಲೆ ಬಂಗಾರ, ಬಟ್ಟೆ ಬರೆಗೆ 10,000 ಹಾಗೂ ಪಾತ್ರೆಗಳಿಗೆ 25,000 ಹೀಗ ಒಟ್ಟು 85,000/- ಗಳನ್ನು ಎದುರುದಾರನಿಗೆ ಕೊಟ್ಟಿದ್ದೇವು ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನನ್ನ ತಂದೆ ತೀರಿಕೊಂಡಿರುತ್ತಾರೆ. ನನ್ನ ತಾಯಿ ಹಾಗೂ ಸಹೋದರರು ಇರುತ್ತಾರೆ. ನನ್ನ ಸಹೋದರರು ಪೈಂಟಿಂಗ್ ಕೆಲಸ ಮಾಡುತ್ತಾರೆ. ಮದುವೆಯಾದ 3 ದಿನಕ್ಕೆ ನಾನು ಲಿಂಗದಹಳ್ಳಿ ಗ್ರಾಮಕ್ಕೆ ಹೋಗಿರುತ್ತೇನೆ. ಎದುರುದಾರನ ಮನೆಯಲ್ಲಿ ಆಗ ಆತನ ತಂದೆ ತಾಯಿ, ಇಬ್ಬರು ಅಣ್ಣಂದಿರು ಹಾಗೂ ಇಬ್ಬರು ಅತ್ತಿಗೆಯರು ಇದ್ದರು. ನಾನು ಒಂದು ತಿಂಗಳ ಕಾಲ ಲಿಂಗದಹಳ್ಳಿ ಗ್ರಾಮದಲ್ಲಿ ಇದ್ದೆ. ನಂತರ ದಾವಣಗೆರೆಗೆ ಹೋಗಿರುತ್ತೇನೆ . ಅಲ್ಲಿ ನಾನು 3 ವರ್ಷಗಳ ಕಾಲ ಇದ್ದೆ.

ನಾನು ದ್ವಿತೀಯ ಪಿಯುಸಿ ವರೆಗೆ ಓದಿರುತ್ತೆನೆ. ಎದುರುದಾರ 10ನೇ ತರಗತಿಯವರೆಗೆ ಓದಿರುತ್ತಾರೆ. ದಾವಾಣಗೆರೆಯಲ್ಲಿದ್ದಾಗ ಖರೀದಿ ಪಡೆದ ಆಸ್ತಿಯು ಜಂಟಿ ಯಾಗಿ ಇರುತ್ತದೆ ಅಂದರೆ ಸಾಕ್ಷಿ ನಮ್ಮಿಬ್ಬರ ದುಡಿಮೆಯಿಂದ ಎದುರುದಾರನ ಹೆಸರಿಗೆ ಇರುತ್ತದೆ. ನಾನು ನನ್ನ ಗಂಡನ ಟೈಲರಿಂಗ್ ಕೆಲಸಕ್ಕೆ ಸಹಾಯ ಮಾಡುತ್ತಿದ್ದೆ. ಆ ಆಸ್ತಿಯಲ್ಲಿ ಎದುರುದಾರನ ಅಣ್ಣಂದಿರು ಹಿಸ್ಸೆ ಇದೆ ಅಂತಾ ಜಗಳ ತೆಗೆದಿರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಎದುರುದಾರನ ಸಹೋದರರೂ ಆತನಿಗೆ ದಾವಾಣಗೆರೆ ಬಿಟ್ಟು ಬಾ ನನ್ನನ್ನು ತವರು ಮನೆಗೆ ಕಳುಹಿಸು ಅಂತಾ ಪ್ರಚೋದನೆ ಕೊಡುತ್ತಿದ್ದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ದಿಃ 07.01.2022 ರಂದು ನನ್ನ ಗಂಡ ನನಗೆ ಹೊಡೆ ಬಡೆ ಮಾಡಿ ಮನೆಯಿಂದ ಹೊರಗೆ ಹಾಕಿರುತ್ತಾನೆ. ನಾನು ಆಗ ಪೋಲಿಸರಿಗೆ ದೂರನ್ನು ನೀಡಿಲ್ಲ. ಎದುರುದಾರ ನನಗೆ ಹೊಡೆ ಬಡೆ ಮಾಡಿಲ್ಲ ಹೀಗಾಗಿ ದೂರನ್ನು ನೀಡಿಲ್ಲ ಅಂದರೆ ಸುಳ್ಳು. ಎದುರುದಾರ ನನ್ನನ್ನು ಆಮೇಲೆ ತವರು ಮನಗೆ ಬಿಟ್ಟು ಹೋಗಿರುತ್ತಾನೆ. ಎದುರುದಾರ ನನ್ನನ್ನು ಹೊಡೆ

ಬಡಿ ಮಾಡಿ ತವರು ಮನೆಗೆ ತಾನೇ ಬಿಟ್ಟು ಹೋಗಿರುತ್ತಾನೆ. ಎದುರುದಾರ ನನ್ನನ್ನು ಮನೆಯಿಂದ ಹೊರಗೆ ಹಾಕಿರುತ್ತಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ತವರು ಮನೆಗೆ ಬಂದಾಗ ನನ್ನ ತಾಯಿ ಹಾಗೂ ಸಹೋದರರು ಏಕೆ ಬಂದಿರುತ್ತೀಯ ಅಂತಾ ವಿಚಾರಿಸಿರುತ್ತಾರೆ. ನಂತರ ಪಂಚಾಯಿತಿ ನಡೆದಿರುತ್ತದೆ. ಅದರಲ್ಲಿ ನನ್ನ ಅಣ್ಣ ತಮ್ಮ, ಮಾವ ಹಾಗೂ ಎದುರುದಾರನ ಅಣ್ಣಂದಿರು ಹಾಜರಿದ್ದರು. ಎದುರುದಾರ ಅಲ್ಲಿ ನನ್ನನ್ನು ಕರೆದುಕೊಂಡು ಹೋಗುವುದಿಲ್ಲ ಅಂತಾ ಹೇಳಿದ. ಪಂಚಾಯಿತಿಯಲ್ಲಿ ನಾನು ಲಿಂಗದಹಳ್ಳಿಗೆ ಹೋಗಲು ಒಪ್ಪಿದ್ದೆ ಅಂದರೆ ಸರಿ. ಸನ್ 2022 ರಿಂದ ಎದುರುದಾರ ನನ್ನನ್ನು ಕರೆಯಲು ಬರುತ್ತಿಲ್ಲ ಹೀಗಾಗಿ ಹೋಗಿಲ್ಲ. ಎದುರುದಾರ ಕರೆಯಲು ಬಂದಾಗ 2 ನೇ ಅರ್ಜಿದಾರರಿಗೆ ಹುಷಾರಿರುವುದಿಲ್ಲ ನಂತರ ಬರುತ್ತೇನೆ ಅಂತಾ ನಾನೇ ಹೇಳಿದ್ದೆ ಅಂದರೆ ಸರಿಯಲ್ಲ. ನಂತರ ಕೆಲ ದಿನಗಳ ಬಳಿಕ ಎದುರುದಾರ ಫೋನ್ ಮಾಡಿದಾಗ ನಾನು ಬರುವುದಿಲ್ಲ ಅಂತಾ ಹೇಳಿ ಫೋನ್ ಸ್ವೀಚ್ ಆಫ್ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಂತರ ಎದುರುದಾರ ಈ ವಿಷಯವಾಗಿ ನನ್ನ ಅಣ್ಣನಿಗೆ ಫೋನ್ ಮಾಡಿದ್ದ ಅವರು ವಿಚಾರಿಸಿ ಹೇಳುತ್ತೇನೆ ಅಂತಾ ಹೇಳಿದ್ದರು ಅಂದರೆ ಸರಿಯಲ್ಲ. ನಂತರ ನನ್ನ ಅಣ್ಣ ಎದುರುದಾರನಿಗೆ ಫೋನ್ ಮಾಡಿ ಅವಳು ಬರುವುದಿಲ್ಲ ವಿಚ್ಛೇದನ ಅರ್ಜಿಗೆ ಸಹಿ ಮಾಡುವಂತೆ ಹೇಳಿದ ಅಂದರೆ ಸರಿಯಲ್ಲ. ನಂತರ ಸಹ ಎದುರುದಾರ ಪ್ರಯತ್ನ ಪಟ್ಟರು ನಾನು ಆತನ ಜೊತೆ ಹೋಗಿಲ್ಲ ಅಂದರೆ ಸರಿಯಲ್ಲ.

3 ವರ್ಷಗಳ ಕಾಲ ನಾನು ಎದುರುದಾರನ ಜೊತೆ ಹೋಗದೇ ಇರುವುದರಿಂದ ದಿಃ 05.09.2024 ರಂದು ಎದುರುದಾರ ಎಂ ಸಿ ನಂಃ 90/2024 ನ್ನು ದಾಖಲಿಸಿರುತ್ತಾನೆ ಅಂದರೆ ಸರಿ. ಆ ಪ್ರಕರಣದಲ್ಲಿ ನಾನು ನನ್ನ ವಕೀಲರ ಮೂಲಕ ಹಾಜರಾಗಿರುತ್ತೇನೆ ಅಂದರೆ ಸರಿ. ಆ ಪ್ರಕರಣದ ನಂತರ 7-8 ತಿಂಗಳ ಬಳಿಕ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿ. ಈ ಅವಧಿಯಲ್ಲಿ ನನ್ನ ಹಾಗೂ 2 ನೇ ಅರ್ಜಿದಾರನ ದಿನನಿತ್ಯದ ಖರ್ಚನ್ನು ನನ್ನ ತವರು ಮನೆಯವರು ನೋಡಿಕೊಳ್ಳುತ್ತಿದ್ದಾರೆ. ಈಗ ನನಗೆ ಯಾವುದೇ ಆರ್ಥಿಕ ಮುಗ್ಗಟ್ಟು ಇಲ್ಲದೇ ಇದ್ದರೂ ಸಹ ಎದುರುದಾರನಿಗೆ ತೊಂದರೆ ಕೊಡಲು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನನಗೆ ಜೀವನಾಂಶದ ಅವಶ್ಯಕತೆ ಇದ್ದರೆ ಎದುರುದಾರ ಮನೆಯಿಂದ ಹೊರಗೆ ಹಾಕಿದಾಗ ದಾಖಲಿಸುತ್ತಿದ್ದೆ ಅಂದರೆ ಸಾಕ್ಷಿ ಎದುರುದಾರ ನನ್ನನ್ನು ಕರೆದುಕೊಂಡು ಹೋಗುತ್ತೇನೆ ಅಂತಾ ಹೇಳಿದ್ದರಿಂದ ಅರ್ಜಿ

ಸಲ್ಲಿಸಿರಲಿಲ್ಲ ಅಂತಾ ಹೇಳುತ್ತಾರೆ. ಎದುರುದಾರ ನನ್ನನ್ನು ಸಾಕಷ್ಟು ಬಾರಿ ಕರೆಯಲು ಬಂದರು ನಾನೇ ಹೋಗಿಲ್ಲ ಅಂದರೆ ಸುಳ್ಳು.

ಎದುರುದಾರನೇ ನನ್ನನ್ನು ಬಂದು ತವರು ಮನೆಗೆ ಬಿಟ್ಟು ಹೋಗಿರುತ್ತಾನೆ ಅಂದರೆ ಸರಿ. ಎದುರುದಾರ ಹೊಡೆ ಬಡಿ ಮಾಡಿ ಮನೆಯಿಂದ ಹೊರಗೆ ಹಾಕಿರುತ್ತಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ದಾವಣಗೆರೆಯಲ್ಲಿ ಇದ್ದಾಗಲೇ ಎದುರುದಾರನಿಗೆ ವೇರಿಕೋಸ್ ವೇನ್ ಆಗಿತ್ತು ಅಂದರೆ ಸಾಕ್ಷಿ ಇಲ್ಲ ಅಂತಾ ಹೇಳುತ್ತಾರೆ. ಅದರ ಬಗ್ಗೆ ಎದುರುದಾರ ದಾಖಲೆ ಹಾಜರುಪಡಿಸಿರುತ್ತಾನೆ ಅಂದರೆ ಸಾಕ್ಷಿ ನಾನು ಇದ್ದಾಗ ಆಗಿರಲಿಲ್ಲ ಅಂತಾ ಹೇಳುತ್ತಾರೆ. ಈಗ ದಾಖಲೆ ಹಾಜರುಪಡಿಸಿರುತ್ತರೆ ಅಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಅಂತಾ ಹೇಳುತ್ತಾರೆ. ಅದರ ಚಿಕಿತ್ಸೆಗೆ ಸಾಕಷ್ಟು ಹಣ ಬೇಕು ಅಂದರೆ ನನಗೆ ಗೊತ್ತಿಲ್ಲ. ಎದುರುದಾರನಿಗೆ ಟೈಲರಿಂಗ್ ಕೆಲಸ ಮಾಡಲು ಆಗುತ್ತಿಲ್ಲ ಹೀಗಾಗಿ ಬೇರೆಯವರ ಬಳಿ ಸಣ್ಣ ಪುಟ್ಟ ಕೆಲಸ ಮಾಡುತ್ತಿದ್ದಾನೆ ಅಂದರೆ ಸರಿಯಲ್ಲ. ನನ್ನ ಅತ್ತೆಗೆ 82 ವರ್ಷ ಆಗಿರುತ್ತದೆ. ಅವಳನ್ನು ಸಹ ಎದುರುದಾರನೇ ಸಾಕುತ್ತಿದ್ದಾನೆ ಅಂದರೆ ಸರಿಯಲ್ಲ. ಅವಳ ಔಷಧಿ ಖರ್ಚನ್ನು ಎದುರುದಾರ ನೋಡಿಕೊಳ್ಳುತ್ತಿದ್ದಾನೆ ಅಂದರೆ ಸುಳ್ಳು.

ಈಗ ನಾನು ಹಾಗೂ 2 ನೇ ಅರ್ಜಿದಾರ ಬ್ಯಾಡಗಿಯಲ್ಲಿ ವಾಸ ಇರುತ್ತೇವೆ. 4 ವರ್ಷಗಳಿಂದ ನಾನು ಅಲ್ಲಿ ವಾಸ ಇದ್ದೇನೆ. 2 ನೇ ಅರ್ಜಿದಾರ 2 ನೇ ತರಗತಿಯಲ್ಲಿ ಓದುತ್ತಿದ್ದಾನೆ. ನನ್ನ ಮನೆ ಬಾಡಿಗೆಯನ್ನು ತವರು ಮನೆಯವರೇ ಕೊಡುತ್ತಿದ್ದಾರೆ. ನಾನೇ ಕೆಲಸ ಮಾಡಿ ಮನೆ ಬಾಡಿಗೆ ಹಾಗೂ 2 ನೇ ಅರ್ಜಿದಾರನ ಖರ್ಚನ್ನು ನೋಡಿಕೊಳ್ಳುತ್ತಿದ್ದೇನೆ ಅಂದರೆ ಸರಿಯಲ್ಲ.

ನಾನು ಇಷ್ಟ ಪಟ್ಟು ಮದುವೆಯಾಗಿರುತ್ತೇನೆ. ನಾನು ಪ್ರತಿದಿನ ಎದುರುದಾರನಿಗೆ ಇಷ್ಟ ಇಲ್ಲದೆ ಮದುವೆಯಾಗಿರುತ್ತೇನೆ ಶ್ರೀಮಂತನ ಜೊತೆ ಮದುವೆ ಆಗಬೇಕಿತ್ತು ನನ್ನ ಅಣ್ಣನ ಒತ್ತಾಯಕ್ಕೆ ಮದುವೆ ಆಗಿರುತ್ತೇನೆ ಅಂತಾ ಆತನಿಗೆ ಕಿರುಕುಳ ನೀಡುತ್ತಿದ್ದೆ ಅಂದರೆ ಸರಿಯಲ್ಲ. ನಾನು ಎದುರುದಾರನ ಜೊತೆ ಲಿಂಗದಹಳ್ಳಿ ಗ್ರಾಮಕ್ಕೆ ಹೋಗುತ್ತಿರಲಿಲ್ಲ ಅಂದರೆ ಸುಳ್ಳು. ಅಲ್ಲಿ ಕೇವಲ 1-2 ದಿನ ಮಾತ್ರ ಇರುತ್ತಿದ್ದೆ ಅಂದರೆ ಸರಿಯಲ್ಲ. ಹೀಗಾಗಿ ಬುದ್ದಿವಾದ ಹೇಳಲು ಎದುರುದಾರ ನನ್ನನ್ನು ತವರು ಮನೆಗೆ ತಂದು ಬಿಟ್ಟಿದ್ದ ಅಂದರೆ ಸುಳ್ಳು. 2 ನೇ ಅರ್ಜಿದಾರ ಇರುವುದರಿಂದ ನಾನು ಸುಧಾರಿಸಬಹುದು ಅಂತಾ ಎದುರುದಾರ ಭಾವಿಸಿದ್ದ ಅಂದರೆ ಸುಳ್ಳು.

ನಿಪಿ-5 ರ ಪ್ರಕಾರ ಜಮೀನು 5 ಜನರ ಹೆಸರಿಗೆ ಇರುತ್ತದೆ ಅಂದರೆ ಸರಿ. ಪ್ರತಿ ಒಬ್ಬರಿಗೆ ತಲಾ 4-5 ಗುಂಟೆ ಜಮೀನು ಮಾತ್ರ ಬರುತ್ತದೆ ಅಂದರೆ ಸರಿ. ನಿಪಿ-6 ರಲ್ಲಿ ಸಹ 6 ಜನರ ಹೆಸರು ಇರುತ್ತದೆ ಅಂದರೆ ಸರಿ. ಇದರಲ್ಲಿ ಸ್ವಲ್ಪ ಜಮೀನು ಸರ್ಕಾರದವರು ಸ್ವಾದೀನ ಮಾಡಿಕೊಂಡಿರುತ್ತಾರೆ ಅಂದರೆ ಸರಿ. ಇದರಲ್ಲಿ ಸಹ ಎದುರುದಾರನಿಗೆ 3-4 ಗುಂಟೆ ಜಮೀನು ಬರುತ್ತದೆ ಅಂದರೆ ಸರಿ. ಇಷ್ಟು ಚಿಕ್ಕ ಹಿಡುವಳಿಯಲ್ಲಿ ಜಮಿನು ಸಾಗು ಮಾಡಲು ಬರುವುದಿಲ್ಲ ಅಂದರೆ ಸುಳ್ಳು. ನಿಪಿ-12 ಮನೆಗೆ ಸಹ ಮೂರು ಜನರ ಹೆಸರು ಇರುತ್ತದೆ ಅಂದರೆ ಸರಿ.  ಸದರಿ ಮನೆ 10 ಗುಂಟೆ ಇರುತ್ತದೆ. ನಿಪಿ-12 ರಲ್ಲಿ ಅಳತೆ ಇರುವುದಿಲ್ಲ 10 ಗುಂಟೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-13 ಮನೆ ಸಹ ನನ್ನ ಮಾವನ ಹೆಸರಿಗೆ ಇರುತ್ತದೆ ಅಂದರೆ ಸರಿ. ಅದರಲ್ಲಿಯೂ ಸಹ 5 ಜನರ ಹೆಸರು ಇರುತ್ತದೆ ಅಂದರೆ ಸರಿ. ಅದರ ಅಳತೆ ಗೊತ್ತಿಲ್ಲ. ಎದುರುದಾರನಿಗೆ ಜಮೀನಿನ ಮೂಲಕ ರೂ.4,00,000 ಉತ್ಪನ್ನ ಇರುತ್ತದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.  ಎದುರುದಾರನಿಗೆ ಹುಷಾರಿಲ್ಲದೇ ಇರುವುದರಿಂದ ಯಾವುದೇ ಜೀವನಾಂಶ ಕೊಡಲು ಶಕ್ತಿ ಇರುವುದಿಲ್ಲ ಅಂದರೆ ಸುಳ್ಳು. ನಾನು ಎದುರುದಾರನಗಿಂತ ಹೆಚ್ಚಿನ ಶಿಕ್ಷಣ ಪಡೆದಿದ್ದರಿಂದ ನಾನು ನನ್ನ ಜೀವನವನ್ನು ನಡೆಸಬಹುದು ಅಂದರೆ ಸರಿಯಲ್ಲ. ಸದರಿ ಅರ್ಜಿ ಸಲ್ಲಿಸಲು ಯಾವುದೇ ಅವಶ್ಯಕತೆ ಇರುವುದಿಲ್ಲ ಅಂದರೆ ಸುಳ್ಳು. ಎದುರುದಾರ ವಿಚ್ಛೇದ್ದನ ಅರ್ಜಿ ಸಲ್ಲಿಸಿದ್ದರಿಂದ ಈ ಅರ್ಜಿಯನ್ನು ಎದುರುದಾರನಿಗೆ ತೊಂದರೆ ಕೊಡಲು ಹಾಕಿರುತ್ತೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.